2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ.5027/2022**

ದಿಃ15.01.2025
ಚಾಸಾ-6 ಪ್ರಾಸಾ-5

| | |
|---|---|
| ಹೆಸರು | ಃ ಶ್ರೀಮತಿ ಕೌಶಲ್ಯ |
| ಗಂಡನ ಹೆಸರು | ಃ ರಾಘವೇಂದ್ರ |
| ವಯಸ್ಸು | ಃ 28 |
| ಉದ್ಯೋಗ | ಃ ಗೃಹಿಣಿ |
| ವಾಸ | ಃ ಬೆಂಗಳೂರು |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ರವರು ನನ್ನ ತಾಯಿ. ಚಾಸಾ-2 ರವರು ನನ್ನ ಗಂಡ. ಚಾಸಾ-3 ರವರು ನನ್ನ ಮಾವ. ಚಾಸಾ-4 ರವರು ನನ್ನ ಅಣ್ಣ. ಚಾಸಾ-5 ರವರು ನನ್ನ ತಮ್ಮ. ಚಾಸಾ-7 ರವರು ನನ್ನ ಮಾವ. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

ದಿಃ09.05.2020 ರಂದು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ-2 ರಿಂದ 5 ಮತ್ತು 7 ರವರು ಚಾಸಾ-1 ರವರ ಮನೆಯಲ್ಲಿರುವಾಗ ನ್ಯಾಯಾಲಯದ ಮುಂದಿರುವ ಆರೋಪಿತರು ಇನ್ನೋವಾ ಕಾರಿನಲ್ಲಿ ಬಂದು, ಮನೆಯ ಮುಂಭಾಗದ ಗೇಟ್‌ನ್ನು ಒಡೆದು ಮನೆಯ ಒಳಗೆ ನುಗ್ಗಿ ಹಲ್ಲೆ ಮಾಡಲು ಪ್ರಯತ್ನಪಟ್ಟಿರುತ್ತಾರೆ. ಆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರು ಚಾಸಾ-4 ರವರನ್ನು ಮನೆಯಿಂದ ಹೊರಗೆ ಎಳೆದುಕೊಂಡು ಹೋಗಲು ಪ್ರಯತ್ನಪಟ್ಟಿದ್ದು, ಆ ಸಮಯದಲ್ಲಿ ಚಾಸಾ-2 ರವರು ತಡೆದಿರುತ್ತಾರೆ. ಚಾಸಾ-4 ರವರ ವಿವಾಹವನ್ನು ಆರೋಪಿ-3 ರವರೊಂದಿಗೆ ಮಾಡುವ ಉದ್ದೇಶದಿಂದ ಚಾಸಾ-4 ರವರನ್ನು ಮನೆಯಿಂದ ಹೊರಗೆ ಕರೆದುಕೊಂಡು ಹೋಗಲು ಪ್ರಯತ್ನಪಟ್ಟಿರುತ್ತಾರೆ. ಆ ಸಮಯದಲ್ಲಿ ಚಾಸಾ-1 ರಿಂದ 3 ರವರು ತೆದಿರುತ್ತಾರೆ. ಆ ಸಮಯದಲ್ಲಿ 5 ನೇ ಆರೋಪಿಯು ಚಾಸಾ-2 ರವರ ಬಲಭಾಗದ ತಲೆಗೆ ಚಾಕುವಿನಿಂದ ಚುಚ್ಚಿ ರಕ್ತಗಾಯಪಡಿಸಿ, ಅವರನ್ನು ಹಿಡಿದು ಎಳೆದಾಡಿ ಬಟ್ಟೆಗಳನ್ನು ಹರಿದು ಹಾಕಿರುತ್ತಾರೆ. 4 ನೇ ಆರೋಪಿಯು ಚಾಸಾ-3 ರವರ ತಲೆಯ ಹಿಂಭಾಗಕ್ಕೆ ಕಬ್ಬಿಣದ ರಾಡಿನಿಂದ

ಹಾಗೂ ಎಡಗೈ ಹೆಬ್ಬೆರಳು ಮತ್ತು ತೋರು ಬೆರಳಿಗೆ ಕಲ್ಲಿನಿಂದ ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾನೆ. ನಂತರ ಚಾಸಾ-3 ರವರನ್ನು ಹಿಡಿದು ಎಳೆದಾಡಿ ಬಟ್ಟೆಗಳನ್ನು ಹರಿದು ಹಾಕಿರುತ್ತಾರೆ. ಆರೋಪಿತರು ಚಾಸಾ-1 ರವರಿಗೆ ಅವಾಚ್ಯಶಬ್ಧಗಳಿಂದ ಬೈದು ಕಾಲುಗಳಿಂದ ಒದ್ದು, ಅವರ ಬಟ್ಟೆಗಳನ್ನು ಹಿಡಿದು ಎಳೆದಾಡಿ ಹರಿದು ಹಾಕಿರುತ್ತಾರೆ. ಚಾಸಾ-4 ರವರನ್ನು ನಮ್ಮ ಜೊತೆ ಕಳುಹಿಸಿಕೊಡದಿದ್ದರೇ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿತರು ಚಾಸಾ-1 ರವರ ಕಿಟಕಿ ಗಾಜುಗಳನ್ನು ಒಡೆದು ಹಾಕಿ ಆರ್ಥಿಕ ನಷ್ಟವನ್ನು ಉಂಟು ಮಾಡಿರುತ್ತಾರೆ. ಆರೋಪಿತರು ಹಲ್ಲೆ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯ ನ್ಯಾಯಾಲಯದ ಮುಂದಿರುವ ಒಂದು ಸ್ಟೀಲ್ ಚಾಕು, ಕಬ್ಬಿಣದ ರಾಡು, ಕಲ್ಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-5 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಆರೋಪಿತರು ಹಲ್ಲೆ ಮಾಡಲು ನಮ್ಮ ಮನೆ ಬಳಿ ಬಂದ ಕಾರನ್ನು ಫೋಟೋ ಮೂಲಕ ನೋಡಿ ಗುರುತಿಸಿದ್ದು ಸದರಿ ಫೋಟೋವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ. ಘಟನಾ ಸಮಯದಲ್ಲಿ ಚಾಸಾ-2 ಮತ್ತು 3 ರವರು ಧರಿಸಿದ್ದ ಬಟ್ಟೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬೀಗ ಮತ್ತು ಒಡೆದ ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ನಾನು ಪೊಲೀಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ ಶ್ರೀ ಎಂ.ಎಂ. ವಕೀಲರಿಂದ ಆರೋಪಿತರ ಪರವಾಗಿ</u>**

ನಾನು ಬಿ.ಕಾಂ. ಪದವಿಧರೆ. ನನ್ನ ತಂದೆ ತಾಯಿಗಳು ಮಳವಳ್ಳಿಯ ವರವನ್ನು ಹುಡುಕಿ ಮದುವೆ ಮಾಡಿಕೊಟ್ಟಿರುತ್ತಾರೆ. ಸುಮಾರು 2-3 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿರುತ್ತೇನೆ. ಘಟನೆ ನಡೆಯಿತೆಂದು ಹೇಳಲಾದ ಸಮಯದಲ್ಲಿ ಚಾಸಾ-1 ರವರ ಮನೆಗೆ ಹೆರಿಗೆಗಾಗಿ ಬಂದಿರುತ್ತೇನೆ. ಆರೋಪಿ-5 ಮತ್ತು 6 ರವರು ನನ್ನ ಮಾವ ಮತ್ತು ಅತ್ತೆಯಾಗಬೇಕು. ಆರೋಪಿ-1 ರಿಂದ 4 ರವರನ್ನು ಘಟನೆ ನಡೆಯಿತೆಂದು ಹೇಳಲಾದ ಪೂರ್ವದಲ್ಲಿ ನೋಡಿರುವುದಿಲ್ಲ

ಎಂದರೆ ಸರಿ. ಸಾಕ್ಷಿ ಮುಂದುವರೆದು ಘಟನಾ ದಿವಸದಂದು ಆರೋಪಿ-1 ರಿಂದ 4 ರವರನ್ನು ನೋಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ನನ್ನ ಅಣ್ಣ ಚಾಸಾ-4 ರವರು ಮನೆಯಲ್ಲಿ ಇರುತ್ತಾರೆ. 5 ನೇ ಆರೋಪಿ ನನ್ನ ತಂದೆಯೊಂದಿಗೆ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5 ನೇ ಆರೋಪಿಯು ನನ್ನ ತಂದೆಯೊಂದಿಗೆ ಓಡಾಡಿಕೊಂಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಸುಮಾರು 6 ವರ್ಷಗಳ ಹಿಂದೆ ನನ್ನ ತಂದೆಯವರು ಮರಣ ಹೊಂದಿರುತ್ತಾರೆ. ಗ್ರಾನೈಟ್‌ನ್ನು ಸರಬರಾಜು ಮಾಡಲು ನಮಗೆ ಸೇರಿದ ಎರಡು ಲಾರಿಗಳು ಇರುತ್ತವೆ ಎಂದರೆ ಸರಿ. ಸದರಿ ಲಾರಿಗಳ ಕಾರ್ಮಿಕರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-1 ರವರಿಗೆ ಸೇರಿದ ಮನೆಯು ಕನಕಪುರ-ಸಾತನೂರು ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿ. ಚಾಸಾ-1 ರವರ ಮನೆಯ ಅಕ್ಕಪಕ್ಕದ ಅಲ್ಲಲ್ಲಿ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಘಟನೆ ನಡೆಯಿತೆಂದು ಹೇಳಲಾದ ದಿವಸದಂದು ನ್ಯಾಯಾಲಯದ ಮುಂದಿರುವ ಆರೋಪಿತರೊಂದಿಗೆ ಸುಮಾರು 15 ಜನರು ಬಂದಿರುತ್ತಾರೆ. ಆದರೆ ಅವರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಘಟನೆ ನಡೆಯಿತೆಂದು ಹೇಳಲಾದ ದಿವಸದಿಂದ ಸುಮಾರು 25 ದಿವಸದ ಅಂತರದಲ್ಲಿ ನನಗೆ ಹೆರಿಗೆಯಾಗುವ ಸಂಭವ ಇರುತ್ತದೆಂದು ವೈದ್ಯರು ತಿಳಿಸಿದ್ದರು. ನಮ್ಮ ಮನೆಯ ದಕ್ಷಿಣಾಭಿಮುಖವಾಗಿ ಒಂದು ಸಣ್ಣ ಗೇಟ್ ಹಾಗೂ ಒಂದು ದೊಡ್ಡ ಗೇಟ್ ಇದ್ದು, ದೊಡ್ಡ ಗೇಟ್ ಬಳಿ ಮೇಲ್ಚಾವಣಿ ಹಾಕಿ ಚಾಸಾ-1 ರವರ ಇನ್ನೋವಾ ಕಾರನ್ನು ನಿಲ್ಲಿಸುವುದಕ್ಕೆ ಅವಕಾಶ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾನು ಮನೆಯೊಳಗೆ ಇದ್ದುದರಿಂದ ಗೇಟ್‌ನ್ನು ಯಾರು ಒಡೆದಿರುತ್ತಾರೆ ಎಂಬುದರ ಬಗ್ಗೆ ತಿಳಿದಿರುವುದಿಲ್ಲ. ಆರೋಪಿ-2, 4 ಮತ್ತು 5 ರವರು ಮೊದಲಿಗೆ ಚಾಸಾ-4 ರವರನ್ನು ಹೊರಗೆ ಕಳುಹಿಸಿಕೊಡುವಂತೆ ಹೇಳಿರುತ್ತಾರೆ. ಆ ಸಮಯದಲ್ಲಿ ನಾನು ಹಾಗೂ ಚಾಸಾ-1 ರಿಂದ 5 ಮತ್ತು 7 ರವರು ಮನೆಯ ಡೈನಿಂಗ್ ಹಾಲ್‌ನಲ್ಲಿ ಇದ್ದೆವು. ಚಾಸಾ-4 ರವರು ಸಾತನೂರಿನ ಸರ್ಕಾರಿ ಶಾಲೆಯಲ್ಲಿ ಹತ್ತನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತಾರೆ. ಚಾಸಾ-4 ರವರಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆದರೆ ಚಾಸಾ-4 ರವರಿಗೆ ಸಹಿ ಹೇಗೆ ಮಾಡಬೇಕೆಂದು ಹೇಳಿಕೊಟ್ಟಿರುತ್ತೇವೆ. ಚಾಸಾ-4 ರವರು ಬ್ಯಾಂಕ್ ಖಾತೆಯನ್ನು ಹೊಂದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-4 ರವರು ಚಾಲನಾಪರವಾನಗಿ ಹೊಂದಿರುವ ಬಗ್ಗೆ ನನಗೆ

ಮಾಹಿತಿ ಇರುವುದಿಲ್ಲ. ಚಾಸಾ-4 ರವರ ಹೆಸರಿನಲ್ಲಿ ಒಂದು ದ್ವಿಚಕ್ರ ವಾಹನ ನೋಂದಣಿಯಾಗಿರುತ್ತದೆ ಎಂದರೆ ಸರಿ. ಸದರಿ ಮೋಟರ್ ಸೈಕಲ್‌ನ್ನು ಚಾಸಾ-4 ರವರು ಚಾಲನೆ ಮಾಡುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಚಾಸಾ-4 ರವರು ಕೇವಲ ಅರ್ಧ ಕಿಲೋ ಮೀಟರ್ ವರೆಗೆ ಚಾಲನೆ ಮಾಡುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಆರೋಪಿ-3 ರವರು ಚಾಸಾ-4 ರವರ ಶಾಲಾ ಸಹಪಾಠಿ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು ಚಾಸಾ-1 ರವರ ಮನೆಗೆ ಬಂದು ಆರೋಪಿ-3 ಮತ್ತು ಚಾಸಾ-4 ರವರು ಪ್ರೀತಿ ಮಾಡುತ್ತಿದ್ದು, ಅವರ ಮದುವೆ ಮಾಡುವ ಸಲುವಾಗಿ ಚಾಸಾ-4 ರವರನ್ನು ಮನೆಯ ಹೊರಗೆ ಕಳುಹಿಸಿಕೊಡಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು, ಚಾಸಾ-1 ರಿಂದ 5 ಮತ್ತು 7 ರವರು ಆರೋಪಿತರ ಮೇಲೆ ಹಲ್ಲೆ ಮಾಡಲು ಪ್ರಯತ್ನಪಟ್ಟಿರುತ್ತೇವೆ ಎಂದರೆ ಸರಿಯಲ್ಲ. ಘಟನೆ ನಡೆಯಿತೆಂದು ಹೇಳಲಾದ ಸಮಯದಲ್ಲಿ ನಾನು ಗರ್ಭಿಣಿಯಾಗಿದ್ದರಿಂದ ಮನೆಯ ಹೊರಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು, ಚಾಸಾ-1, 2 ಮತ್ತು 3 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರಿಂದ 5 ಮತ್ತು 7 ರವರು ಆರೋಪಿತರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ ಚಾಸಾ-1 ರವರು ಧರಿಸಿದ್ದು ಎನ್ನಲಾದ ಬಟ್ಟೆಗಳನ್ನು ಪೊಲೀಸರು ಅಮಾನತುಪಡಿಸಿಕೊಂಡಿರುವುದಿಲ್ಲ. ಚಾಸಾ-1 ರವರ ಮನೆಯಿಂದ ಮೂರು ಕಿಲೋ ಮೀಟರ್ ದೂರದಲ್ಲಿ ಸಾತನೂರು ಪೊಲೀಸ್ ಠಾಣೆ ಇರುತ್ತದೆ. ಸಾತನೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇರುತ್ತದೆ ಎಂದರೆ ಸರಿ. ಚಾಸಾ-1 ರಿಂದ 3 ರವರನ್ನು ನಾನು, ಚಾಸಾ-4, 5, 7 ಮತ್ತು ನಮ್ಮ ಸಂಬಂಧಿಕರಾದ ಸುಗುಣ ಎಂಬುವವರು ಕನಕಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಚಾಸಾ-1 ರವರ ಮನೆಯಿಂದ ಕನಕಪುರ ಸರ್ಕಾರಿ ಆಸ್ಪತ್ರೆಯು ಸುಮಾರು 15 ಕಿಲೋ ಮೀಟರ್ ದೂರದಲ್ಲಿರುತ್ತದೆ. ಚಾಸಾ-1 ರಿಂದ 3 ರವರಿಗೆ ಚಿಕಿತ್ಸೆ ಕೊಡಿಸುವ ಅವಶ್ಯಕತೆ ಇದ್ದುದ್ದರಿಂದ ಸಾತನೂರು ಪೊಲೀಸ್ ಠಾಣೆ ಹಾಗೂ ಕನಕಪುರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುವುದಿಲ್ಲ. ವೈದ್ಯರು ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಘಟನೆ ನಡೆಯಿತೆಂದು ಹೇಳಲಾದ ಸ್ಥಳದ ಅಲ್ಲಲ್ಲಿ ರಕ್ತದ ಕಲೆಗಳು ಬಿದ್ದಿದ್ದವು. ಘಟನೆ

ನಡೆದ ದಿನದಂದು ರಾತ್ರಿ 7-30 ಗಂಟೆಗೆ ಪೊಲೀಸ್ ಠಾಣೆಗೆ ತೆರಳಿ ದೂರನ್ನು ನೀಡಿರುತ್ತಾರೆ. ದೂರನ್ನು ನೀಡಲು ನಾನು ನನ್ನ ತಾಯಿಯ ಜೊತೆ ಹೋಗಿರುವುದಿಲ್ಲ. ಆದರೆ ನಮ್ಮ ಸಂಬಂಧಿಕರಾದ ಸುಗುಣರವರು ಹೋಗಿರುತ್ತಾರೆ. ಘಟನೆ ನಡೆಯಿತೆಂದು ಹೇಳಲಾದ ದಿನದಂದು ಮಧ್ಯಾಹ್ನ ಸುಮಾರು 2-30 ಗಂಟೆ ಸಮಯದಲ್ಲಿ ಕನಕಪುರ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು, ಆ ದಿನ ರಾತ್ರಿ 9-00 ಗಂಟೆಯವರೆಗೂ ಆಸ್ಪತ್ರೆಯಲ್ಲಿ ಇದ್ದೆವು. ಘಟನೆ ನಡೆಯಿತೆಂದು ಹೇಳಲಾದ ಮರುದಿವಸ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಚಾಸಾ-2 ಮತ್ತು 3 ರವರು ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆ, ಬನಿಯನ್ ಶರ್ಟ್, ಒಡೆದ ಗಾಜಿನ ಚೂರು ಹಾಗೂ ಬೀಗವನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಮಹಜರ್ ಜರುಗಿಸುವ ಕಾಲಕ್ಕೆ ನಾನು ಮನೆಯ ಒಳಗೆ ವಿಶ್ರಾಂತಿಯಲ್ಲಿದ್ದೆನು. ಪೊಲೀಸರು ಜರುಗಿಸಿದ ಪಂಚನಾಮೆ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಮ್ಮ ಮನೆ ಬಳಿ ಇದ್ದ ಇನ್ನೋವಾ ಕಾರಿಗೆ ಯಾವುದೇ ಹಾನಿ ಉಂಟಾಗಿರುವುದಿಲ್ಲ ಎಂದರೆ ಸರಿ. ಕನಕಪುರ ಆಸ್ಪತ್ರೆಯಿಂದ ನಮ್ಮ ಮನೆಗೆ ರಾತ್ರಿ 9-30 ಗಂಟೆಗೆ ನಮ್ಮ ಇನ್ನೋವಾ ಕಾರಿನಲ್ಲಿ ಹೋಗಿರುತ್ತೇವೆ. 16 ನೇ ತಾರೀಖಿನಂದು ನನ್ನ ಹಾಗೂ ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡುವ ಸಮಯದಲ್ಲಿ ಆರೋಪಿತರ ಜೊತೆಗೆ ಸುಮಾರು 15 ಜನರು ಬಂದಿದ್ದರು ಎಂದು ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ-4 ಹಾಗೂ ಆರೋಪಿ-3 ರವರ ನಡುವೆ ಮೊದಲಿನಿಂದಲೂ ವಿವಾದ ಇತ್ತು ಎಂಬುದರ ಬಗ್ಗೆ ಹೇಳಿಕೆಯನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೊಲೀಸರು ಆ ಬಗ್ಗೆ ಪ್ರಶ್ನೆ ಮಾಡದ ಕಾರಣ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿ-3 ರವರನ್ನು ಚಾಸಾ-4 ರವರು ಪ್ರೀತಿಸುತ್ತಿದ್ದ ವಿಚಾರ ನಮಗೆ ತಿಳಿದಿತ್ತು ಎಂದರೆ ಸರಿಯಲ್ಲ. ಆದ್ದರಿಂದ ಚಾಸಾ-4 ರವರ ವಿವಾಹವನ್ನು ಬಲವಂತವಾಗಿ ಬೇರೆ ಕಡೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ-4 ರವರು ಚಾಸಾ-3 ರವರಿಗೆ ಕಲ್ಲಿನಿಂದ ತೋರು ಬೆರಳು ಹಾಗೂ ಹೆಬ್ಬೆರಳಿಗೆ ಹಾಗೂ ತಲೆಯಹಿಂಭಾಗಕ್ಕೆ ಕಬ್ಬಿಣದ ರಾಡಿನಿಂದ ಹೊಡೆದು ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾರೆ. 4 ನೇ ಆರೋಪಿತನ ಹಲ್ಲೆಯಿಂದ ಚಾಸಾ-3 ರವರ ತಲೆಯ ಹಿಂಭಾಗದ ಕೂದಲು ರಕ್ತವಾಗಿರುತ್ತದೆ. ವೈದ್ಯರು ಶೂಶ್ರೂಷೆ ಮಾಡುವ ಸಮಯದಲ್ಲಿ ಚಾಸಾ-3 ರವರ ಕೂದಲನ್ನು

ಕತ್ತರಿಸಿ ಉಪಚರಿಸಿರುತ್ತಾರೆ. ವೈದ್ಯರು ಕತ್ತರಿಸಿದ ಕೂದಲಿನ್ನು ಏನು ಮಾಡಿದರು ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲ. ಚಾಸಾ-2 ಮತ್ತು 3 ರವರು ಆಸ್ಪತ್ರೆಗೆ ಬರುವಾಗ ರಕ್ತಕಲೆಯಾದ ಬಟ್ಟೆಗಳೊಂದಿಗೆ ಬಂದಿರುತ್ತಾರೆ. ಕಾರಿನ ಒಳಭಾಗದ ಸೀಟ್ ರಕ್ತದ ಕಲೆ ಇರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಎಂಓ-1 ನ್ನು ತೋರಿಸಿದ್ದು, ಸಾಕ್ಷಿಯು ಎಂಓ-1 ಮುಂಭಾಗದಲ್ಲಿ ರಕ್ತದಕಲೆಯಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನಂತರ ಸಾಕ್ಷಿಗೆ ಎಂಓ-1 ನ್ನು ತೋರಿಸಿ ರಕ್ತದಕಲೆಯಾಗಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಎಂಓ-2 ರಕ್ತದಕಲೆಯಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗೆ ಎಂಓ-2 ನ್ನು ಚಾಸಾ-3 ರವರು ಧರಿಸಿದ್ದು, ಆಸ್ಪತ್ರೆಗೆ ಹೋಗುವ ಸಮಯದಲ್ಲಿ ಅದರ ಮೇಲೆ ಬೇರೆ ಶರ್ಟನ್ನು ಧರಿಸಿದ್ದರು. ಸದರಿ ಶರ್ಟಿಗೆ ರಕ್ತದ ಕಲೆಯಾಗಿತ್ತೋ ಇಲ್ಲವೋ ಎಂಬುದರ ಬಗ್ಗೆ ನಾನು ಗಮನಿಸಿರುವುದಿಲ್ಲ. 10 ನೇ ತಾರೀಖಿನಂದು ಪೊಲೀಸರು ಚಾಸಾ-2 ಮತ್ತು 3 ರವರು ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ.

ದಿಃ10.05.2020 ರಂದು ಬೆಳಗ್ಗೆ 6-00 ರಿಂದ 6-30 ಗಂಟೆ ಸಮಯದಲ್ಲಿ ಚಾಸಾ-4 ರವರ ಮದುವೆಯಾಗಿರುತ್ತದೆ. ಚಾಸಾ-4 ರವರಿಗೆ ಮದ್ದೂರು ತಾಲ್ಲೂಕಿನ ಹಾಲೂರು ಗ್ರಾಮದಿಂದ ಹೆಣ್ಣನ್ನು ತಂದಿರುತ್ತೇವೆ. ಚಾಸಾ-4 ರವರ ಮದುವೆಯನ್ನು ಮುಗಿಸಿಕೊಂಡು ಅದೇ ದಿನ ಬೆಳಗ್ಗೆ 8-30 ಗಂಟೆಗೆ ಮನೆಗೆ ವಾಪಸ್ ಬಂದಿರುತ್ತೇವೆ. ಚಾಸಾ-4 ರವರನ್ನು ಮದುವೆಯನ್ನು 3 ನೇ ಆರೋಪಿಯೊಂದಿಗೆ ತಪ್ಪಿಸುವ ಸಲುವಾಗಿ ಆತುರಾತುರವಾಗಿ ಮದುವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಆರೋಪಿಯು ಚಾಸಾ-1 ಮತ್ತು 4 ರವರ ವಿರುದ್ದ ಸಾತನೂರು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುವ ವಿಚಾರ ನನಗೆ ತಿಳಿದಿರುವುದಿಲ್ಲ. ನಂತರ 3 ನೇ ಆರೋಪಿಯು ನ್ಯಾಯ ಕೇಳುವ ಉದ್ದೇಶದಿಂದ ಚಾಸಾ-1 ಮತ್ತು 4 ರವರ ಬಳಿ ಬಂದಾಗ ನಾನು ಹಾಗೂ ನಮ್ಮ ಕುಟುಂಬದ ಸದಸ್ಯರು ಅವರ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 3 ರವರು ಸ್ವತಃ ರಕ್ತಗಾಯ ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ಚಾಸಾ-1 ರಿಂದ 3 ರವರ ಮೇಲೆ ಹಲ್ಲೆ

ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎಂಒ-1 ರಿಂದ 7ನ್ನು ಈ ಕೇಸಿಗೋಸ್ಕರ ಪೊಲೀಸರೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂಒ-6ನ್ನು ನಮ್ಮ ಮನೆಯಿಂದ ತಂದು ಪೊಲೀಸರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ.5027/2022**

ದಿ:15.01.2025
ಚಾಸಾ-7 ಪ್ರಾಸಾ-6

| | |
|---|---|
| ಹೆಸರು | : ರಾಕೇಶ್ |
| ತಂದೆಯ ಹೆಸರು | : ಸೀತರಾಮೇಗೌಡ |
| ವಯಸ್ಸು | : 45 |
| ಉದ್ಯೋಗ | : ವ್ಯವಸಾಯ |
| ವಾಸ | : ತೋಟಹಳ್ಳಿ |

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ರವರು ನನ್ನ ಅಕ್ಕ. ಚಾಸಾ-2 ರವರು ಚಾಸಾ-1 ರವರ ಅಳಿಯ. ಚಾಸಾ-3 ರವರು ನನ್ನ ತಮ್ಮ. ಚಾಸಾ-4 ರಿಂದ 6 ರವರು ಚಾಸಾ-1 ರವರ ಮಕ್ಕಳು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

ದಿ:09.05.2020 ರಂದು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ನಾನು, ಚಾಸಾ-2 ರಿಂದ 6 ರವರು ಚಾಸಾ-1 ರವರ ಮನೆಯಲ್ಲಿರುವಾಗ ನ್ಯಾಯಾಲಯದ ಮುಂದಿರುವ ಆರೋಪಿತರು ಚಾಸಾ-1 ರವರ ಮನೆಯ ಗೇಟ್ ಒಡೆದು ಮನೆಯ ಒಳಗೆ ನುಗ್ಗಿ ಚಾಸಾ-4 ರವರನ್ನು ಆರೋಪಿ-3 ರವರೊಂದಿಗೆ ಮದುವೆ ಮಾಡಲು ಬಲವಂತವಾಗಿ ಕರೆದುಕೊಂಡು ಹೋಗಲು ಪ್ರಯತ್ನಪಟ್ಟಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ-1 ರಿಂದ 3 ರವರು ಚಾಸಾ-4 ರವರನ್ನು ಆರೋಪಿತರಿಂದ ರಕ್ಷಣೆ ಮಾಡಲು ಅಡ್ಡ ಹೋಗಿರುತ್ತೇವೆ. ಆ ಸಮಯದಲ್ಲಿ 5 ನೇ ಆರೋಪಿಯು ಕೊಲೆ ಮಾಡುವ ಉದ್ದೇಶದಿಂದ ಚಾಸಾ-2 ರವರ ತಲೆಯ ಬಲಭಾಗಕ್ಕೆ ಚಾಕುವಿನಿಂದ ಚುಚ್ಚಿ ರಕ್ತಗಾಯಪಡಿಸಿರುತ್ತಾನೆ. ನಂತರ ಆರೋಪಿತರು ಚಾಸಾ-1 ರವರನ್ನು ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿರುತ್ತಾರೆ. ಚಾಸಾ-3 ರವರಿಗೆ 4 ನೇ ಆರೋಪಿಯು ಕಬ್ಬಿಣದ ರಾಡಿನಿಂದ ಮತ್ತು ಕಲ್ಲಿನಿಂದ ತಲೆಯ ಹಿಂಭಾಗಕ್ಕೆ ಹಾಗೂ ಎಡಗೈ ತೋರುಬೆರಳು ಹಾಗೂ ಹೆಬ್ಬೆರಳಿಗೆ ಹೊಡೆದು ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾನೆ. ಚಾಸಾ-4 ರವರನ್ನು ನಮ್ಮ ಜೊತೆ ಕಳುಹಿಸಿಕೊಡದಿದ್ದರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲವೆಂದು

ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ. ಘಟನಾ ಸಮಯದಲ್ಲಿ ಚಾಸಾ-2 ರವರು ಧರಿಸಿದ್ದ ಟಿಶರ್ಟ್ ಹಾಗೂ ಚಾಸಾ-3 ರವರು ಧರಿಸಿದ್ದ ಬನಿಯನ್ ರಕ್ತಕಲೆಯಾಗಿರುತ್ತದೆ. ಆರೋಪಿತರು ಚಾಸಾ-1 ರವರ ಮನೆಯ ಕಿಟಕಿ ಗಾಜುಗಳನ್ನು ಒಡೆದು ಆರ್ಥಿಕ ನಷ್ಟವನ್ನುಂಟುಮಾಡಿರುತ್ತಾರೆ.

ಸಾಕ್ಷಿಯು ದಿಃ10.05.2020 ರಂದು ಜರುಗಿಸಿದ ಸ್ಥಳ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ದಿಃ10.05.2020 ರಂದು ಬೆಳಗ್ಗೆ 10-00 ರಿಂದ 11-00 ಗಂಟೆಗೆ ಸಾತನೂರು ಪೊಲೀಸರು ಚಾಸಾ-1 ರವರ ಮನೆಯ ಬಳಿ ಬಂದು ನನ್ನ ಹಾಗೂ ಚಾಸಾ-1 ಮತ್ತು 8 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿದ್ದು, ಆ ಸಮಯದಲ್ಲಿ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-2 ನ್ನು ಜರುಗಿಸುವ ಕಾಲಕ್ಕೆ ಪೊಲೀಸರು ಒಡೆದ ಗಾಜಿನ ಚೂರು, ಬಿಳಿ ಬಣ್ಣದ ಬನಿಯನ್, ಗೇಟಿನ ಬೀಗ, ಟಿಶರ್ಟ್ ಮತ್ತು ಆರೋಪಿತರು ಬಂದಿದ್ದ ಇನ್ನೋವಾ ಕಾರನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂಓ-1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿತರು ಬಂದಿದ್ದ ಇನ್ನೋವಾ ಕಾರನ್ನು ನಿಪಿ-3 ರ ಮೂಲಕ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿತರು ಚಾಸಾ-2 ಮತ್ತು 3 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲು, ಚಾಕು ಹಾಗೂ ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂಓ-5 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಪೊಲೀಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಎಂ.ಎಂ. ವಕೀಲರಿಂದ ಆರೋಪಿತರ ಪರವಾಗಿ</u>

ನಾನು ಎಸ್‌ಎಸ್‌ಎಲ್‌ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಕನಕಪುರದ ಚಾಸಾ-1 ರವರ ಮನೆಯಲ್ಲಿ ವಾಸವಾಗಿರುತ್ತೇನೆ. ನನಗೆ ತೋಟಹಳ್ಳಿಯಲ್ಲಿ 4 ಎಕರೆ ಜಮೀನು ಇದ್ದು, ಅದರಲ್ಲಿ ವ್ಯವಸಾಯ ಮಾಡಿಕೊಂಡು ಬಂದಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ರಿಂದ 4 ನೇ ಆರೋಪಿತರನ್ನು ಘಟನೆ ನಡೆಯುವ ಪೂರ್ವದಲ್ಲಿ ನೋಡಿರುವುದಿಲ್ಲ. ಆರೋಪಿ-5 ಕೇಶವಮೂರ್ತಿ

ನನ್ನ ದೊಡ್ಡಪ್ಪನ ಮಗ. ಆರೋಪಿ-3 ರವರು ಚಾಸಾ-1 ಮತ್ತು 4 ರವರ ವಿರುದ್ಧ ಸಾತನೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವ ವಿಚಾರ ನನಗೆ ತಿಳಿದಿರುವುದಿಲ್ಲ. ಸಾತನೂರು ಪೊಲೀಸರು ಚಾಸಾ-1 ಮತ್ತು 4 ರವರನ್ನು ಠಾಣೆಗೆ ಕರೆಯಿಸಿ ವಿಚಾರಣೆ ನಡೆಸಿರುವ ವಿಷಯನ್ನು ಚಾಸಾ-1 ರವರು ನನಗೆ ತಿಳಿಸಿರುವುದಿಲ್ಲ.

ದಿಃ09.05.2020 ರಂದು ಬೆಳಗ್ಗೆ 8-00 ರಿಂದ 8-30 ಗಂಟೆಗೆ ಚಾಸಾ-1 ರವರ ಮನೆಗೆ ಹೋಗಿರುತ್ತೇನೆ. ಆರೋಪಿತರು ಚಾಸಾ-1 ರವರ ಮನೆಯ ಒಳಗೆ ಬಂದಾಗ ನಾನು ಮನೆಯ ಒಳಗೆ ಇದ್ದೆನು. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ-1 ರಿಂದ 6 ರವರು ಇದ್ದರು. ಚಾಸಾ-4 ರವರು ಎಲ್ಲಿಯವರೆಗೆ ಮತ್ತು ಯಾವ ಶಾಲೆಯಲ್ಲಿ ವ್ಯಾಂಸಗ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ. ಚಾಸಾ-1 ರವರಿಗೆ ಸೇರಿದ ಲಾರಿಗಳು ಯಾರು ಹೆಸರಿನಲ್ಲಿ ನೊಂದಣಿಯಾಗಿರುತ್ತವೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-4 ರವರು ಯಾವ ಬ್ಯಾಂಕಿನಲ್ಲಿ ಖಾತೆಗಳನ್ನು ಹೊಂದಿರುತ್ತಾರೆ ಎನ್ನುವ ವಿಷಯ ನನಗೆ ತಿಳಿದಿರುವುದಿಲ್ಲ. ಚಾಸಾ-1 ರವರ ಬಳಿ ಇರುವ ಮೋಟರ್ ಸೈಕಲ್ ಹಾಗೂ ಕಾರು ಯಾರ ಹೆಸರಿನಲ್ಲಿ ಇರುತ್ತವೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಚಾಸಾ-1 ರವರ ಮನೆಯ ಒಳಗೆ ನ್ಯಾಯಾಲಯದ ಮುಂದಿರುವ ಆರೋಪಿತರು ಬಂದಿರುತ್ತಾರೆ. ಮನೆಯ ಗೇಟಿನ ಹೊರ ಭಾಗದಲ್ಲಿ ನಿಂತಿದ್ದ ಜನರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ-1 ರವರ ಮನೆಗೆ ಬಂದು, ಚಾಸಾ-4 ರವರು ಆರೋಪಿ-3 ರವರನ್ನು ಪ್ರೀತಿಸುತ್ತಿದ್ದು ಅವರ ವಿವಾಹವನ್ನು ಮಾಡಲು ಚಾಸಾ-4 ರವರನ್ನು ನಮ್ಮ ಜೊತೆ ಕಳುಹಿಸಿಕೊಡಿ ಎಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಜೊತೆ ಚಾಸಾ-4 ರವರನ್ನು ಕಳುಹಿಸದಿದ್ದರೆ ಬಲವಂತವಾಗಿ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಹಾಗೂ ಚಾಸಾ-1 ರಿಂದ 6 ರವರು ಆರೋಪಿತರ ಮೇಲೆ ಹಲ್ಲೆ ಮಾಡಲು ಪ್ರಯತ್ನಪಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬೆಂಗಳೂರಿನ ಶಿವಶಕ್ತಿ ಮಹಿಳಾ ಸಂಘದ ಸದಸ್ಯರು ತಡೆದಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-2 ಮತ್ತು 3 ರವರು ಸ್ವತಃ ಕೆಳಗೆ ಬಿದ್ದು ರಕ್ತಗಾಯಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 6 ರವರು ಆರೋಪಿತರಿಗೆ ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿ ಅವರೊಂದಿಗೆ ಅಮಾನುಷವಾಗಿ ವರ್ತಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ರಿಂದ 6 ರವರು ಸ್ವತಃ ತಮ್ಮ ಮನೆಯ ಕಿಟಕಿಯ ಗಾಜುಗಳನ್ನು ಒಡೆದು ಹಾಕಿ ಆರೋಪಿತರ ಮೇಲೆ ಸುಳ್ಳು ಆಪಾದನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರ ಮನೆಯ ದಕ್ಷಿಣ ದಿಕ್ಕಿಗೆ ಯಾರ ಮನೆ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ದಕ್ಷಿಣ ದಿಕ್ಕಿಗೆ ಯಾರ ಮನೆ ಬರುತ್ತದೆ ಎಂದು ಹೇಳಲು ನನಗೆ ಬರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಪ್ಲಾಸ್ಟಿಕ್ ಹಿಡಿಕೆ ಇರುವ ಸ್ಟೀಲ್ ಚಾಕುವನ್ನು ತೋರಿಸಿ, ಅದರ ಮೇಲೆ ರಕ್ತದ ಕಲೆ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆ ಸಮಯದಲ್ಲಿ ರಕ್ತದ ಕಲೆಯಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗೆ ಎಂಒ-6 ಮತ್ತು 7 ನ್ನು ತೋರಿಸಿ ಅದರ ಮೇಲೆ ರಕ್ತದ ಕಲೆ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಘಟನಾ ಸಮಯದಲ್ಲಿ ರಕ್ತದ ಕಲೆಯಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಘಟನೆ ನಡೆಯಿತೆಂದು ಹೇಳಲಾದ ಸ್ಥಳದ ಅಲ್ಲಲ್ಲಿ 4-5 ಕಡೆ ರಕ್ತದ ಕಲೆಗಳು ಬಿದ್ದಿರುವುದನ್ನು ನೋಡಿ ಗಮನಿಸಿರುತ್ತೇನೆ. ಈ ಬಗ್ಗೆ ಪೊಲೀಸರು ಮಹಜರಿನಲ್ಲಿ ಬರೆದಿರುವುದರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಚಾಸಾ-2 ಮತ್ತು 3 ರವರನ್ನು ನಾನು, ಚಾಸಾ-1 ಮತ್ತು 8 ರವರು ಚಿಕಿತ್ಸೆಗಾಗಿ ಕನಕಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಚಾಸಾ-2 ಮತ್ತು 3 ರವರು ಒಂದು ದಿನ ಒಳರೋಗಿಯಾಗಿ ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ಚಾಸಾ-2 ಮತ್ತು 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಸುಮಾರು 3-00 ಗಂಟೆ ಆಗಿತ್ತು. ನಂತರ 5-00 ಗಂಟೆಗೆ ಆಸ್ಪತ್ರೆಯಿಂದ ವಾಪಸ್ ಬಂದಿರುತ್ತೇನೆ. ಚಾಸಾ-1 ರವರ ಮನೆಯಿಂದ ಸಾತನೂರು ಪೊಲೀಸ್ ಠಾಣೆಯು ಸುಮಾರು 3-00 ಕಿಲೋ ಮೀಟರ್ ದೂರದಲ್ಲಿರುತ್ತದೆ. ಕನಕಪುರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಪ್ರಯತ್ನಪಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಚಾಸಾ-1 ರವರು ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಸಮಯದವರೆಗೂ ಇದ್ದರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು, ಚಾಸಾ-1 ಮತ್ತು 8 ರವರನ್ನು ಹೊರತುಪಡಿಸಿ ಬೇರೆ ಯಾರು ಚಾಸಾ-2 ಮತ್ತು 3 ರವರನ್ನು ಆಸ್ಪತ್ರೆಗೆ

ಕರೆದುಕೊಂಡು ಹೋಗಿರುವುದಿಲ್ಲ. ಎಂಓ-5 ರಿಂದ 7 ನ್ನು ಪೊಲೀಸರು ಚಾಸಾ-1 ರವರ ಮನೆಯಿಂದ ವಶಕ್ಕೆ ಪಡೆದಿರುತ್ತಾರೆ. ಪೊಲೀಸರು ಎಂಓ-5 ರಿಂದ 7 ನ್ನು ಅಮಾನತುಪಡಿಸಿಕೊಂಡ ನಂತರ ಅವುಗಳ ಮೇಲೆ ನನ್ನ ಸಹಿ ಇರುವ ಚೀಟಿಗಳನ್ನು ಅಂಟಿಸಿರುತ್ತಾರೆ. ಚಾಸಾ-2 ಮತ್ತು 3 ರವರು ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳು ರಕ್ತವಾಗಿದ್ದವು. ರಕ್ತಕಲೆಯಾದ ಬಟ್ಟೆಯಲ್ಲಿಯೇ ಆಸ್ಪತ್ರೆಗೆ ಹೋಗಿದ್ದು, ನಂತರ ಅಲ್ಲಿ ತೆಗೆದು ಮನೆಯಲ್ಲಿ ತಂದು ಇಟ್ಟಿರುತ್ತಾರೆ. ಚಾಸಾ-2 ಮತ್ತು 3 ರವರು ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಆಸ್ಪತ್ರೆಯಲ್ಲಿ ತೆಗೆದು ಅವುಗಳನ್ನು ಯಾರ ಬಳಿ ಕೊಟ್ಟರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-2 ಮತ್ತು 3 ರವರಿಗೆ ಬದಲಿ ಬಟ್ಟೆಗಳನ್ನು ಯಾರು ವ್ಯವಸ್ಥೆ ಮಾಡಿದರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-2 ಮತ್ತು 3 ರವರನ್ನು ಕನಕಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದನ್ನು ಬಿಟ್ಟರೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ. ಚಾಸಾ-2 ಮತ್ತು 3 ರವರು ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಯಾರು ಮನೆಗೆ ತಂದು ಇಟ್ಟಿದ್ದರು ಮತ್ತು ಅದನ್ನು ಯಾರು ಪೊಲೀಸರಿಗೆ ನೀಡಿದರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ದಿಃ16.05.2020 ರಂದು ಸಾತನೂರು ಪೊಲೀಸ್ ಠಾಣೆಗೆ ಹೋಗಿ ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆ ಕಾಲದಲ್ಲಿ ಆರೋಪಿ-3 ಮತ್ತು ಚಾಸಾ-4 ರವರ ನಡುವೆ ಮೊದಲಿನಿಂದಲೂ ಮದುವೆ ಮಾಡಿಕೊಳ್ಳುವ ಬಗ್ಗೆ ವಿವಾದವಿದ್ದ ಬಗ್ಗೆ ಹೇಳಿರುವುದಿಲ್ಲ. ಚಾಸಾ-4 ರವರು ಸುಮಾರು ವರ್ಷಗಳಿಂದ ಆರೋಪಿ-3 ರವರನ್ನು ಪ್ರೀತಿಸುತ್ತಿದ್ದು, ಈ ಬಗ್ಗೆ ದಿಃ08.05.2020 ರಂದು ಆರೋಪಿ-3 ರವರು ಚಾಸಾ-1 ಮತ್ತು 4 ರವರ ವಿರುದ್ಧ ಸಾತನೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಂತರ ಸಾತನೂರು ಪೊಲೀಸರು ಕೌಟುಂಬಿಕ ವಿಚಾರವಾದ್ದರಿಂದ ಮಾತನಾಡಿಕೊಂಡು ಮನೆಯಲ್ಲಿಯೇ ಬಗೆಹರಿಸಿಕೊಳ್ಳಿ ಎಂದು ಸಲಹೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ತರಾತುರಿಯಲ್ಲಿ ಚಾಸಾ-4 ರವರ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ10.05.2020 ರಂದು ಚಾಸಾ-4 ರವರ ವಿವಾಹವಾಗಿರುತ್ತದೆ. ದಿಃ09.05.2020 ರಂದು ಆರೋಪಿತರು ಬೆಂಗಳೂರಿನ ಶಿವಶಕ್ತಿ ಮಹಿಳಾ ಸದಸ್ಯರೊಂದಿಗೆ ನ್ಯಾಯ ಕೇಳಲು ಬಂದಾಗ ಚಾಸಾ-1 ರಿಂದ 6 ರವರು ಆರೋಪಿತರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ09.05.2020 ರಂದು ನಾನು ಚಾಸಾ-1 ರವರ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಚಾಸಾ-1 ರವರು ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಹಾಗೂ ಚಾಸಾ-1 ರಿಂದ 6 ರವರು ಸೇರಿಕೊಂಡು ಎಂಒ-1 ರಿಂದ 7 ನ್ನು ಬನಾವಟ್ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.